ಅಸಲು ದಾವಾ ನಂ:**36/2023**
ಪಿ ಡಬ್ಲ್ಯು:**01**

<u>ದಿನಾಂಕ:**25/03/2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಮುಂದುವರಿದ ಪಾಟೀ ಸವಾಲು: ಶ್ರೀ ಹೆಚ್ ಎ ಎಸ್ ವಕೀಲರಿಂದ:</u>

ನನಗೆ ಸೀತೂರು ಗ್ರಾಮದ ಎನ್ ಪಿ ಉಮೇಶ ಬಿನ್ ಬಿ ಪುಟ್ಟಸ್ವಾಮಿ ಇವರ ಬಗ್ಗೆ ಗೊತ್ತಿರುವುದಿಲ್ಲ. ನಾನು ಸದರಿಯವರಿಗೆ ಸಂಬಂಧಿಸಿದ ಯಾವುದೇ ಜಾಗವನ್ನು ಖರೀದಿ ಮಾಡಿರುವುದಾಗಲೀ ಅಥವಾ ಅವರ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರಕ್ಕೆ ನಾನು ಹೋಗಿರುವುದಿಲ್ಲ. ನನಗೆ ನರೇಂದ್ರ ಬಿನ್ ಶಿವಣ್ಣಗೌಡ, ಮುತ್ತಿನಕೊಪ್ಪ ಇವರ ಪರಿಚಯ ಇರುತ್ತದೆ. ಸಾಕ್ಷಿಗೆ ಈಗ ಒಂದು ಕ್ರಯಪತ್ರದ ಆನ್ ಲೈನ್ ಪ್ರತಿಯನ್ನು ತೋರಿಸಲಾಗಿ ಸದರಿ ಕ್ರಯಪತ್ರಕ್ಕೆ ನಾನು, ನರೇಂದ್ರ ಬಿನ್ ಶಿವಣ್ಣಗೌಡ ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇವೆ ಎಂದರೆ ಸರಿ. ಸಾಕ್ಷಿ ಸದರಿ ದಾಖಲೆಯನ್ನು ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ 3 ಎಂದು, ಸಹಿಯನ್ನು ನಿಡಿ 3(ಎ) ಎಂದು ಗುರುತಿಸಲಾಯ್ತು. ನಿಡಿ 3 ಕ್ಕೆ ನಾನು ತಾಲ್ಲೂಕು ಕಚೇರಿಗೆ ಹೋದಾಗ ನನ್ನ ಸ್ನೇಹಿತ ನರೇಂದ್ರರವರು ಸಹಿ ಮಾಡಿಸಿರುತ್ತಾರೆ. ನೀವು ಸುಮಾರು ಕ್ರಯಪತ್ರಗಳಿಗೆ ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿ ನನ್ನ ಆತ್ಮೀಯ ಸ್ನೇಹಿತರು ಬಂದಾಗ ಮಾತ್ರ ಮಾಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನಿಡಿ 3 ರಲ್ಲಿ ನಮೂದಿಸಿದ ಆಸ್ತಿಯನ್ನು ನಾನು ಕ್ರಯದ ಕರಾರು ಪತ್ರದ ಮುಖಾಂತರ ಖರೀದಿ ಮಾಡಿ, ಹೆಚ್ಚಿನ ಹಣಕ್ಕೆ ಮಂಜುನಾಥಶೆಟ್ಟಿ ರವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸಾಕ್ಷಿ ನರೇಂದ್ರ ಮಾರಾಟ ಮಾಡಿರಬಹುದು, ನಾನು ಸಹಿ ಹಾಕಿರುತ್ತೇನೆ ಎಂದು ಉತ್ತರಿಸಿರುತ್ತಾರೆ.

2. ನರೇಂದ್ರರವರು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಾರೆ ಎಂದರೆ ಸಾಕ್ಷಿ ನನಗೆ ಅವರ ಬಗ್ಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದು, ರೈತರಿಂದ ಜಮೀನುಗಳನ್ನು ಕರಾರು ಪತ್ರದ ಮುಖಾಂತರ ಖರೀದಿಸಿ ಹೆಚ್ಚಿನ ಬೆಲೆಗೆ ಬೇರೆಯವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ದೂರ ಇರುತ್ತೇನೆ ಎಂದು ಉತ್ತರಿಸಿರುತ್ತಾರೆ. ನಾನು ತೀರ್ಥಹಳ್ಳಿಯಲ್ಲಿ ವಾಸವಿದ್ದು, ಎನ್ ಆರ್ ಪುರಕ್ಕೆ ಬಂದು ಮಾರಾಟ ಮಾಡಲು ಆಗುವುದಿಲ್ಲ ಎಂದು ದೂರ ಅಂತ ಎಂದು ಉತ್ತರಿಸಿರುತ್ತೇನೆ ಎಂದರೆ ಸರಿಯಲ್ಲ.

3. ದಿ: 09/01/2023 ರಂದು ನಮ್ಮ ವಕೀಲರ ಮುಖಾಂತರ ನೋಟೀಸು ಕೊಟ್ಟಿದ್ದು, ಸದರಿ ನೋಟೀಸಿಗೆ ಯಾರು ಮಾಹಿತಿ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ನಾನು ಮತ್ತು ರಿಜು ಎನ್ನುವವರು ಮಾಹಿತಿ ಕೊಟ್ಟಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ಸಾಕ್ಷಿ ಮುಂದುವರಿದು ನನಗೆ ವಕೀಲರು ಗೊತ್ತಿಲ್ಲದ ಕಾರಣ ರಿಜು ಅವರ ಬಳಿ ಕರೆದುಕೊಂಡು ಹೋಗಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನಾವು ನೀಡಿದ ನೋಟೀಸಿನಲ್ಲಿ ಸ್ವಾಧೀನಕೊಟ್ಟ ಬಗ್ಗೆ ನೀವು ಹೇಳಿರುತ್ತೀರಾ ಎಂದರೆ ಸಾಕ್ಷಿ ನನಗೆ ಅಷ್ಟಾಗಿ ನೆನಪಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸಾಕ್ಷಿ ಮುಂದುವರಿದು ಕರಾರು ಆದ ವರ್ಷದಂದು ಸ್ವಾದೀನಕೊಟ್ಟಿದ್ದರು

ಎಂದು ಉತ್ತರಿಸಿರುತ್ತಾರೆ. ದಾವಾ ಸ್ವತ್ತು ಪ್ರತಿವಾದಿಗೆ ಯಾವಾಗ ಮಂಜೂರು ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಈಗ ನೆನಪಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಪ್ರತಿವಾದಿಗೆ ಮಂಜೂರಾದ ಆಸ್ತಿಯ ದಾಖಲೆ ನೋಡಿರುತ್ತೀರಾ ಎಂದರೆ ಸಾಕ್ಷಿ ವಕೀಲರು ನೋಡಿರುತ್ತಾರೆ, ನನಗೆ ಯಾವುದೇ ದಾಖಲೆ ಕೊಟ್ಟಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿ ಕರಾರು ಪತ್ರ ಆಗುವ ಕಾಲಕ್ಕೆ ಹಾಗೂ ನೋಟೀಸು ಕೊಡುವ ಕಾಲಕ್ಕೆ ಯಾರಿಗೆ ಮಂಜೂರು ಆಗಿರುತ್ತದೆ ಎಂಬ ದಾಖಲೆಯನ್ನು ನೋಡಿರುತ್ತೀರಾ ಎಂದರೆ ಸಾಕ್ಷಿ ನಮಗೆ ದಾಖಲೆಯನ್ನೇ ಕೊಟ್ಟಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಯಾವ ಆಧಾರದ ಮೇಲೆ ನೋಟೀಸಿನಲ್ಲಿ ದಾವಾ ಆಸ್ತಿ ಮಂಜೂರು ಆಗಿರುತ್ತದೆ ಎಂದು ಬರೆಸಿರುತ್ತೀರಿ ಎಂದರೆ ಸಾಕ್ಷಿ ಆ ರೀತಿ ಬರೆಯಲು ನಾನು ಮಾಹಿತಿ ಕೊಟ್ಟಿರುವುದಿಲ್ಲ ಆದರೆ ಕರಾರು ಪತ್ರ ಕೊಟ್ಟಿದ್ದೆ ಎಂದು ಉತ್ತರಿಸಿರುತ್ತಾರೆ.

4. ಕರಾರು ಪತ್ರ ಆದ 3 ತಿಂಗಳೊಳಗಾಗಿ ಪ್ರತಿವಾದಿ ನನಗೆ ಬ್ಯಾಂಕಿನ ಆಧಾರ್ ಖುಲಾಸೆ ಮಾಡಿ ದಾಖಲೆ ಕೊಟ್ಟಿದ್ದರು ಎಂದರೆ ಸಾಕ್ಷಿ ದಾಖಲೆ ಕೊಟ್ಟಿರುವುದಿಲ್ಲ ಆದರೆ ಆಧಾರ್ ಖುಲಾಸೆ ಮಾಡಿದ್ದರು ಎಂದು ಹೇಳಿದ್ದರು ಎಂದು ಉತ್ತರಿಸಿರುತ್ತಾರೆ. ಪ್ರತಿವಾದಿಗಳು ಕ್ರಯದ ಕರಾರು ಪತ್ರ ಪ್ರಕಾರ ನಡೆದುಕೊಳ್ಳಲು ಸಿದ್ಧರಿದ್ದರೂ ಸಹ ನಾನು ಬಾಕಿ ಹಣವನ್ನುಕೊಡದೇ ಕರಾರು ಪಾಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಬಳಿ ಕೊಡಬೇಕಾದ ಬಾಕಿ ಹಣ ಇರಲಿಲ್ಲ ಮತ್ತು ನಾನು ಸದರಿ ಹಣವನ್ನು ಕೊಡುವಷ್ಟು ಶಕ್ತನಿರಲಿಲ್ಲ ಎಂದರೆ ಸರಿಯಲ್ಲ.

5. ದಿಃ 08/07/2022 ರಂದು ಪ್ರತಿವಾದಿ ಎನ್ ಆರ್ ಪುರದಲ್ಲಿ ನಿವೇಶನ ಕೊಳ್ಳಲು ಕರಾರು ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಕರಾರು ಪತ್ರದ ಪ್ರಕಾರ ಬಾಕಿ ಹಣ ಕೊಡುತ್ತೇನೆ ಎಂದು ಹೇಳಿದ ಕಾರಣ ಅವರು ದಿಃ 08/11/2022 ರಂದು ಕ್ರಯ ಪತ್ರ ಮಾಡಿಕೊಳ್ಳುವುದಾಗಿ ಕರಾರು ಪತ್ರದಲ್ಲಿ ನಿಬಂದನೆಗೆ ಒಪ್ಪಿಕೊಂಡಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ ಬಾಕಿ ಹಣ ಕೊಡದೇ ಇರುವ ಕಾರಣ ಅವರು ನೀಡಿದ ಮುಂಗಡ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಸದರಿ ನಿವೇಶನವನ್ನು ಗಿರೀಶ ಎನ್ನುವವರಿಗೆ ಮಾರಾಟ ಮಾಡಿದ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ ಹಲವಾರು ಬಾರಿ ನನ್ನ ಬಳಿ ಬಂದು ಬಾಕಿ ಹಣ ನೀಡಿ, ಕ್ರಯಪತ್ರ ಮಾಡಿಕೊಳ್ಳುವಂತೆ ಕೇಳಿದ್ದರೂ ಸಹ ನಾನು ಕರಾರು ಪಾಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

6. ದಿಃ 27/03/2023 ರಂದು ಪ್ರತಿವಾದಿ ರೆವಿನ್ಯೂ ಇಲಾಖೆಯಿಂದ ಎನ್ ಓ ಸಿ ಪಡೆದು ಕರಾರು ಪತ್ರವನ್ನು ರದ್ದುಪಡಿಸಿ ಹಣ ಮುಟ್ಟುಗೋಲು ಹಾಕಿಕೊಳ್ಳುವಂತೆ ನೋಟೀಸು ಕಳುಹಿಸಿದ್ದರು ಎಂದರೆ ಸರಿ. ಸದರಿ ನೋಟೀಸು ನನಗೆ ಜಾರಿಯಾಗಿತ್ತು ಎಂದರೆ ಸರಿ. ಸಾಕ್ಷಿ ಸದರಿ ನೋಟೀಸನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ 4 ಎಂದು, ಅಂಚೆ ಸ್ವೀಕೃತಿ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಡಿ 5 ಎಂದು, ಸಾಕ್ಷಿಯ ಸಹಿಯನ್ನು ನಿಡಿ 5(ಎ) ಎಂದು ಗುರುತಿಸಲಾಯ್ತು. ನಿಡಿ 4 ರಂತೆ ಪ್ರತಿವಾದಿ ನೋಟೀಸು ಕೊಟ್ಟ ನಂತರ ನಾನು

ಕರಾರು ಪತ್ರದ ಪಾಲನೆ ಮಾಡಲು ಸಿದ್ಧನಿದ್ದೇನೆ ಎಂದು ನಮ್ಮ ವಕೀಲರ ಮುಖಾಂತರ ನೋಟೀಸು ಕಳುಹಿಸಿರುವುದಿಲ್ಲ ಆದರೆ ಬಾಯಿ ಮಾತಿನ ಮೂಲಕ ಹೇಳಿರುತ್ತೇನೆ. ನಾನು ದಾವಾ ಆಸ್ತಿಯನ್ನು ಕ್ರಯ ಮಾಡಿಕೊಳ್ಳುವ ಇಚ್ಛೆ ಇರಲಿಲ್ಲ ಹಾಗೂ ಆ ಕಾಲಕ್ಕೆ ನಾನು ಮಾರಾಟಗಾರರನ್ನು ಹುಡುಕುತ್ತಿದ್ದೆ ಎಂದರೆ ಸರಿಯಲ್ಲ.

7. ಈ ದಾವೆಯಲ್ಲಿ ಯಾವ್ಯಾವ ಆಸ್ತಿಗಳನ್ನು ದಾವಾ ಆಸ್ತಿಯೆಂದು ತೋರಿಸಿರುತ್ತೇನೆ ಎಂಬುದರ ಬಗ್ಗೆ ನನಗೆ ಗೊತ್ತಿರುತ್ತದೆ. ದಾವಾ ಸ್ವತ್ತು 2 ಯಾವ ಸರ್ವೆ ನಂಬರು ಎಂದರೆ ಸಾಕ್ಷಿ ಸರ್ವೆ ನಂಃ 137/2 ಎಂದು ಉತ್ತರಿಸಿರುತ್ತಾರೆ. ದಾವಾ ಸ್ವತ್ತು 2 ಕ್ಕೆ ಸಂಬಂದಪಟ್ಟಂತೆ ಯಾವುದಾದರೂ ದಾಖಲೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ದಾವಾ ಸ್ವತ್ತು 2 ಕ್ಕೆ ಸಂಬಂದಪಟ್ಟಂತೆ ನಾನು ಯಾವುದೇ ದಾಖಲಾತಿ ಪರಿಶೀಲಿಸಿಲ್ಲ ಎಂದರೆ ಸರಿ. ಪ್ರತಿವಾದಿ ನೀಡಿದ ನೋಟಿಸಿನಲ್ಲಿ ದಾವಾ ಸ್ವತ್ತು 2 ರ ಬಗ್ಗೆ ಎಲ್ಲೂ ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ದಾವಾ ಸ್ವತ್ತು 2 ಕ್ಕೆ ಪ್ರತಿವಾದಿ ಮಾಲೀಕರು ಇರುವುದಿಲ್ಲ ಎಂದರೆ ಸಾಕ್ಷಿ ಅವರೇ ಕರಾರು ಪತ್ರ ಬರೆದುಕೊಡುವ ಕಾಲಕ್ಕೆ ನಮ್ಮದೇ ಆಸ್ತಿ ಎಂದು ಬರೆದುಕೊಟ್ಟಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನಾನು ಕ್ರಯದ ಕರಾರು ಪತ್ರದ ನಿಬಂದನೆಗಳನ್ನು ಪಾಲಿಸುವಲ್ಲಿ ವಿಫಲನಾಗಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನೋಟೀಸು ನೀಡಿ ಕರಾರನ್ನು ರದ್ದುಗೊಳಿಸಿ, ಮುಂಗಡ ಹಣವನ್ನು ಮುಟ್ಟುಗೋಲು ಹಾಕಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನಾನು ಹಲವಾರು ಬಾರಿ ಕ್ರಯಪತ್ರ ಮಾಡಿಕೊಡುವಂತೆ ಅವರನ್ನು ಕೇಳಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನಾನು ಯಾವಾಗಲೂ ಕ್ರಯ ಕರಾರು ಪತ್ರದ ನಿಬಂಧನೆಗಳನ್ನು ಪಾಲನೆ ಮಾಡಲು ತಯಾರು ಇರಲಿಲ್ಲ ಎಂದರೆ ಸಾಕ್ಷಿ ನಾನು ಈಗಲೂ ಸಹ ಸಿದ್ಧನಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನನಗೆ ದಾವಾ ಆಸ್ತಿಯನ್ನು ಖರೀದಿಸುವ ಇಚ್ಛೆ ಇರಲಿಲ್ಲ, ನಾನು ಸದರಿ ಆಸ್ತಿಯನ್ನು ಬೇರೆಯವರಿಗೆ ಮಾರಾಟ ಮಾಡುವ ಉದ್ದೇಶವನ್ನು ಹೊಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಕೇಳಿದ ಪರಿಹಾರವನ್ನು ಪಡೆಯಲು ಅರ್ಹನಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ ಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.